भारत सरकार GOVERNMENT OF INDIA · शिक्षा मंत्रालय MINISTRY OF EDUCATION

ವಿದ್ಯೆಯ ಕುರಿತ ಹತ್ತು ಕುರಳ್‌ಗಳು

அதிகாரம் 40 · கல்வி · Chapter 40 · Learning (Kalvi)

---

391 கற்க கசடறக் கற்பவை கற்றபின்
நிற்க அதற்குத் தக.

ಕಲಿ ಕಚಟತಪವ, ಕಲಿಯಲುಚಿತವ
ಕಲಿತು ನೆಲೆಸಿರು ಜೀವಿತವ ಅದರಂತೆ.

392 எண்ணென்ப ஏனை எழுத்தென்ப இவ்விரண்டும்
கண்ணென்ப வாழும் உயிர்க்கு.

ಎಣಿಕೆ ಎಂಬುರು, ಅಕ್ಷರವೆಂಬುರು
ಇವ್ವೆರಡನೂ ಕಣ್ಣು ಎಂಬರು ಜಗದಿ ಜೀವಾತ್ಮನ.

393 கண்ணுடையர் என்பவர் கற்றோர் முகத்திரண்டு
புண்ணுடையர் கல்லா தவர்.

ಕಣ್ಣುಳ್ಳವನೆಂಬರು ಕಲಿತವನ; ಮುಖದಲಿ ಎರಡು
ಹುಣ್ಣುಳ್ಳವರೆಂಬರು ಕಲಿಯದವರ.

394 உவப்பத் தலைக்கூடி உள்ளப் பிரிதல்
அனைத்தே புலவர் தொழில்.

ಸಂತಸವನೀವರು ಕೂಡಿರಲು ವಿದ್ವಾಂಸರು, ಬೀಳ್ಕೊಡೆ
ಸಂತಸವ ಕಾಯ್ದಿರಿಸಿ ತೆರಳ್ವರು ಮತ್ತೆ ಕೂಡಲು.

395 உடையார்முன் இல்லார்போல் ஏக்கற்றுங் கற்றார்
கடையரே கல்லா தவர்.

ಉಳ್ಳವರ ಮುಂದೆ ನಿಂತು ಇಲ್ಲದವ ಬೇಡುವಂತೆ;
ವಿನಯದಿ ವಿದ್ವಾಂಸರೊಳು ನಿಂತು ಕಲಿತವನ ಉತ್ತಮನೆಂಬರು; ಅಧಮನೆಂಬರು ಕಲಿಯದವನ.

396 தொட்டனைத் தூறும் மணற்கேணி மாந்தர்க்குக்
கற்றனைத் தூறும் அறிவு.

ತೋಡಿದಷ್ಟೂ ತುಂಬಿ ತುಳುಕುವುದು ಮರಳು ಮಣ್ಣಿನ ಬಾವಿ
ಕಲಿತಷ್ಟೂ ತುಂಬಿ ಬೆಳಗುವುದು ಜ್ಞಾನ ಜ್ಯೋತಿ.

397 யாதானும் நாடாமால் ஊராமால் என்னொருவன்
சாந்துணையுங் கல்லாத வாறு.

ವಿದ್ವಾಂಸಗೆ ನಾಡಿಲ್ಲ ಊರಿಲ್ಲ;
ವಿದ್ಯಾ ಸಾಧನೆಯ ಬಿಟ್ಟು ಊರೂರು ಅಲೆಯಲು ಫಲವೇನು?

398 ஒருமைக்கண் தான்கற்ற கல்வி ஒருவற்கு
எழுமையும் ஏமாப் புடைத்து.

ಈ ಜನುಮದಲಿ ತಾ ಕಲಿತ ವಿದ್ಯೆ ಓರ್ವಗೆ
ಈಯುವುದು ಏಳೇಳು ಜನ್ಮಕ್ಕೂ ಸುಖ ಶಾಂತಿಯ.

399 தாமின் புறுவது உலகின் புறக்கண்டு
காமுறுவர் கற்றறிந் தார்.

ಕಲಿತು ಪಡೆದ ಸಂತಸದ ಮಿತಿಯರಿತು,
ಪರರ ಸುಖ ಸಾಗರಕೆ ಕರೆದೊಯ್ಯಲು ಕಲಿತರಿತವರು ಕಾಮುಕರಂತೆ ಅಧಿಕಾಧಿಕ ವಿದ್ಯಾರ್ಜನೆ ಮಾಡುವರು.

400 கேடில் விழுச்செல்வம் கல்வி யொருவற்கு
மாடல்ல மற்றை யவை.

ಕಲಿತ ವಿದ್ಯೆ ಓರ್ವಗೆ ಕೂಡಿಟ್ಟ ಸಂಪತ್ತಿರುವಂತೆ
ಕೆಡದದು, ಉಳಿದೆಲ್ಲ ತುಚ್ಛವು ಅದರ ಮುಂದೆ.

ಕಾಶಿ ತಮಿಳು ಸಂಗಮಂ 5.0 · ತಿರುಕ್ಕುರಳ್ ಪಯಿಲ್ಲೋಂ
ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ
ಕೇಂದ್ರೀಯ ಶಾಸ್ತ್ರೀಯ ತಮಿಳು ಸಂಸ್ಥೆ (CICT), ಚೆನ್ನೈ
ಅನುವಾದಗಳು © ಕೇಂದ್ರೀಯ ಶಾಸ್ತ್ರೀಯ ತಮಿಳು ಸಂಸ್ಥೆ, ಚೆನ್ನೈ · CC BY 4.0

kts.cict.in